ಸಂಖ್ಯೆ:ಎ6/ಎಫ್‌ಸಿ/ಎಮ್ಮಿಗನೂರು/29278/ಸಿಆರ್-45/2017-18

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ
ದಿನಾಂಕ:13-08-2024.

ಇವರಿಗೆ,
ಅರಣ್ಯ ಸಂರಕ್ಷಣಾಧಿಕಾರಿಗಳು,
ಬಳ್ಳಾರಿ ವೃತ್ತ, ಬಳ್ಳಾರಿ.

ಮಾನ್ಯರೇ,

ವಿಷಯ: ಹೊಳಲ್ಕೆರೆ ತಾಲ್ಲೂಕು, ಟಿ.ಎಮ್ಮಿಗನೂರು ಗ್ರಾಮದ ಸ.ನಂ.140 ರ ಸೆಕ್ಷನ್-4 ಘೋಷಿತ ಅರಣ್ಯ ಪ್ರದೇಶದಲ್ಲಿ 0.692 ಹೆಕ್ಟೇರ್ ರಸ್ತೆ ನಿರ್ಮಾಣಕ್ಕಾಗಿ ಅರಣ್ಯ ಸಂರಕ್ಷಣಾ ಕಾಯ್ದೆಯನ್ವಯ ಅನುಮತಿ ಕೋರಿರುವ ಬಗ್ಗೆ. **Proposal No.FP/KA/ROAD/29278/2017.**

ಉಲ್ಲೇಖ:
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್.ಸಿ.ಎ), ಬೆಂಗಳೂರು ರವರ ಕಛೇರಿ ಪತ್ರ ದಿನಾಂಕ:12-04-2024.
2. ತಮ್ಮ ಕಛೇರಿ ಪತ್ರ ಸಂಖ್ಯೆ: M1.QRY.Road.CR-6/2017-18/344 ದಿನಾಂಕ:26-05-2024.
3. ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ ರವರ ಕಛೇರಿ ಪತ್ರ ಸಂಖ್ಯೆ:ಐ.ಎನ್.ಡಿ.ಹೆಚ್.ಎಲ್.ಕೆ. ಸಿಆರ್/55/ 2024-25 ದಿನಾಂಕ:02-08-2024.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರಣ್ಯ ಸಂರಕ್ಷಣಾ ಕಾಯ್ದೆ-1980 ರನ್ವಯ ಹೊಳಲ್ಕೆರೆ ತಾಲ್ಲೂಕು, ಟಿ. ಎಮ್ಮಿಗನೂರು ಗ್ರಾಮದ ಸ.ನಂ.140 ರ ಸೆಕ್ಷನ್-4 ಘೋಷಿತ ಅರಣ್ಯ ಪ್ರದೇಶದಲ್ಲಿ 0.692 ಹೆಕ್ಟೇರ್ ರಸ್ತೆ ನಿರ್ಮಾಣಕ್ಕಾಗಿ ಶ್ರೀ ವಿರೇಶ್ ತಂದೆ ವೆಂಕಟೇಶಪ್ಪ, **M/s Shivapuram Constructions, Chitradurga** ರವರು ಸಲ್ಲಿಸಿರುವ ಪ್ರಸ್ತಾವನೆಯನ್ವಯ, ಈ ಕಛೇರಿ ಪತ್ರ ದಿನಾಂಕ:30.01.2018, 24.01.2020, 17.02.2020, 06.08.2021 ಮತ್ತು 16.11.2023 ರನ್ವಯ ಮೇಲಾಧಿಕಾರಿಗಳಿಗೆ ಈ ಕಛೇರಿಯಿಂದ ವರದಿ ಸಲ್ಲಿಸಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಲ್ಲೇಖಿತ (1) ರ ಪತ್ರದಲ್ಲಿ ರಾಜ್ಯ ಸರ್ಕಾರದ ಪತ್ರ ದಿನಾಂಕ: 28-03-2024 ರಲ್ಲಿ ಸೂಚಿಸಿದಂತೆ, ಸದರಿ ಸಂಸ್ಥೆಯ ಖಾಸಗಿ ಜಮೀನನ್ನು ಸಂಪರ್ಕಿಸಲು ಇತರೆ ಯಾವುದೇ ಪರ್ಯಾಯ ಮಾರ್ಗಗಳು ಇರುವುದಿಲ್ಲವೆಂದು ಸ್ಥಳೀಯ ಸಕ್ಷಮ ಪ್ರಾಧಿಕಾರಿಯಾದ ಸಹಾಯಕ ಆಯುಕ್ತರು ಚಿತ್ರದುರ್ಗ ಉಪ ವಿಭಾಗ ಕಂದಾಯ ಇಲಾಖೆ ಇವರಿಂದ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಅದರನ್ವಯ, ಈ ಕಛೇರಿ ಪತ್ರ ದಿನಾಂಕ:10-06-2024 ರನ್ವಯ ವರದಿ ಸಲ್ಲಿಸಲು ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ ರವರನ್ನು ಕೋರಲಾಗಿರುತ್ತದೆ.

ಉಲ್ಲೇಖ (೩) ರಲ್ಲಿ ಸದರಿ ಪ್ರಸ್ತಾವನಗೆ ಸಂಬಂಧಿಸಿದಂತೆ, ತಹಶೀಲ್ದಾರರು, ಹೊಳಲ್ಕೆರೆ ತಾಲ್ಲೂಕು, ಹೊಳಲ್ಕೆರೆ ರವರ ವರದಿ ದಿನಾಂಕ:18-07-2024 ಹಾಗೂ ನಕಾಶೆಯೊಂದಿಗೆ ಈ ಕಛೇರಿಗೆ ವರದಿ ಸಲ್ಲಿಸಿದ್ದು, ಉಲ್ಲೇಖ (೩) ರನ್ವಯ ಉಪ ವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ ರವರ ಪತ್ರ ಹಾಗೂ ಅಡಕಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

ತಮ್ಮ ನಂಬುಗೆಯ,
ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.

**ಪ್ರತಿಯನ್ನು** ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಹಾಗೂ ನೋಡಲ್ ಅಧಿಕಾರಿಗಳು (ಎಫ್.ಸಿ.ಎ), ಬೆಂಗಳೂರು ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

**ಪ್ರತಿಯನ್ನು** ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚಿತ್ರದುರ್ಗ ಉಪ-ವಿಭಾಗ, ಚಿತ್ರದುರ್ಗ ರವರ ಮಾಹಿತಿಗಾಗಿ ಕಳುಹಿಸಿದೆ.

**ಪ್ರತಿಯನ್ನು** ವಲಯ ಅರಣ್ಯಾಧಿಕಾರಿ ಹೊಳಲ್ಕೆರೆ ವಲಯ, ಹೊಳಲ್ಕೆರೆ ರವರಿಗೆ ಮಾಹಿತಿ ಹಾಗೂ ಕ್ರಮಕ್ಕಾಗಿ ಕಳುಹಿಸುತ್ತಾ ಅರಣ್ಯ ಪ್ರದೇಶದಲ್ಲಿ ಅರಣ್ಯೇತರ ಚಟುವಟಿಕೆಗಳು ನಡೆಯದಂತೆ ಕ್ರಮವಹಿಸಲು ಸೂಚಿಸಿದೆ.

**ಪ್ರತಿಯನ್ನು** **M/s Shivapuram Constructions, Saraswathi Dadavane, 2nd mian, Chinmay Janani Nilaya, Chitradurga** ರವರ ಮಾಹಿತಿಗಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿತ್ರದುರ್ಗ ವಿಭಾಗ, ಚಿತ್ರದುರ್ಗ.



FC proposal/Yemmiganuru

ಜಾರಿಸಿದೆ.
14-8-24